Ref.No. 75/2023

MW-1,

ದಿನಾಂಕಃ 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಎಂ ಎಸ್ ವಿ ವಕೀಲರಿಂದಃ

2022 ರಲ್ಲಿ ಕಾರ್ಮಿಕರು ಸಲ್ಲಿಸಿದಂತಹ charter of demands ಕಾನೂನು ಬದ್ದವಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯು ಲಾಸ್ ನಲ್ಲಿ ನಡೆಯುತ್ತಿದ್ದರಿಂದ ಸದರಿ charter of demands ಅನ್ನು ಒಪ್ಪಿಕೊಳ್ಳಲು ಆಗಿರುವುದಿಲ್ಲ. 2 ನೇ ಪಾರ್ಟಿ ಸಂಸ್ಥೆ ಯು ಯೂನಿಯನ್ ನ ಜೊತೆ ಯಾವಾ ವರ್ಷದಿಂದ ಸೆಟ್ಲೆಮೆಂಟ್ ಮಾಡಿಕೊಳ್ಳುತ್ತಿದೆ ಎಂದು ನನಗೆ ಈಗ ನೆನಪಿಲ್ಲ. 1998 ಯಿಂದ 2022 ರವರೆಗೆ ಸಂಸ್ಥೆ ಯು ಯೂನಿಯನ್ ಜೊತೆ ಸೆಟ್ಲಮೆಂಟ್ ಮಾಡಿಕೊಂಡು ಬರುತ್ತಿದೆ ಎಂದರೆ ಸರಿ. 2019 ರಲ್ಲಿ ಒಪ್ಪಿಕೊಂಡಂತಹ ಸೆಟ್ಲಮೆಂಟ್ ಅನ್ನು ಜಾರಿಗೆ ತಂದು 2022 ರವರೆಗೆ ಮುಂದುವರೆಸಿರುತ್ತೇವೆ ಎಂದರೆ ಸರಿ . 2020-21 ರಲ್ಲಿ ಗ್ಲೊಬಲ್ ರಿಸೆಷನ್ ಇದ್ದರೂ ಕೂಡ 2019 ರ ಸೆಟ್ಲಮೆಂಟ್ ಅನ್ನು ಮುಂದುವರೆಸಿರುತ್ತೇವೆ ಎಂದರೆ ಸರಿ . 2020-21 ರಲ್ಲಿ ಗ್ಲೊಬಲ್ ರಿಸೆಷನ್ ಇದ್ದಾಗಲೂ ಕೂಡ ಕಾರ್ಮಿಕರಿಗೆ ಸೆಟ್ಲಂಮೆಂಟ್ ಅನ್ವಯ ಎಲ್ಲಾ ಸೌಲಭ್ಯಗಳನ್ನು ನೀಡಿರುತ್ತೇವೆ ಹಾಗೂ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ ಎಂದು ಯಾವುದೇ ಪತ್ರವನ್ನು ಯೂನಿಯನ್ ಗೆ ಬರೆದಿಲ್ಲ ಎಂದರೆ ಸರಿ . 2022 ರಲ್ಲಿ ಗ್ಲೊಬಲ್ ರಿಸೆಷನ್ ಇರದೇ ಇದ್ದರಿಂದ ಸಂಸ್ಥೆ ಗೆ ಯಾವುದೇ ನಷ್ಟ ಆಗಿರುವುದಿಲ್ಲ ಎಂದರೆ ಸರಿಯಲ್ಲ . ಸಂಸ್ಥೆಯಲ್ಲಿ ಸುಮಾರು 145 ಕಾರ್ಮಿಕ ರು ಕೆಲಸ ಮಾಡುತ್ತಿದ್ದರು. 2022 ರಿಂದ 2025 ರವರೆಗೆ ಖಾಯಂ ನೌಕರರಿಗೆ 2019 ರ ಸೆಟ್ಲಮೆಂಟ್ ನ ಅನ್ವಯ ಸೌಲಭ್ಯಗಳನ್ನು ನೀಡುತ್ತಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಿ ಡಿ ಎ ನ್ನು ಹೆಚ್ಚಿಸಿರುತ್ತೇವೆ ಮತ್ತು ವಾರ್ಷಿಕ ಬಡ್ತಿಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ . 2022-23 financial year ನಲ್ಲಿ ನಮ್ಮ ಸಂಸ್ಥೆ ಯು ಫ್ರಾಪಿಟ್ ಮಾಡಿರುತ್ತದೆ ಎಂದರೆ ಸರಿ . ಅದೇ ರೀತಿ 2023-24 financial year ನಲ್ಲಿ ನಮ್ಮ ಸಂಸ್ಥೆ ಯು ಹಿಂದಿನ ವರ್ಷಕ್ಕಿಂತ ಹೆಚ್ಚಿನ ಫ್ರಾಪಿಟ್ ಮಾಡಿರುತ್ತದೆ ಎಂದರೆ ಸರಿ. ಅದೇ ರೀತಿ 2024-25 financial year ನಲ್ಲಿ ನಮ್ಮ ಸಂಸ್ಥೆ ಯು ಹಿಂದಿನ ವರ್ಷಕ್ಕಿಂತ ಹೆಚ್ಚಿನ ಫ್ರಾಪಿಟ್ ಮಾಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಎಲ್ಲಾ ವರ್ಷಗಳಲ್ಲಿ ಲಾಭವನ್ನು ಸಂಸ್ಥೆಯು steam sales ಮೂಲಕ ಮಾಡಿರುತ್ತದೆ. Craft paper sales ನಲ್ಲಿ 2020 ರಿಂದ ನಷ್ಟವನ್ನು ಅನುಭವಿಸುತ್ತಿದೆ . Steam sales ನಿಂತ ತಕ್ಷಣ ಸಂಸ್ಥೆಯು ನಷ್ಟಕ್ಕೆ ಹೊರಟುಹೋಗುತ್ತದೆ ಎಂದು ನುಡಿಯುತ್ತಾರೆ . Boiler section ನಲ್ಲಿ 1 ನೇ ಪಾರ್ಟಿಯ ಕೇವಲ 7 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಸೆಕ್ಸನ್ ಗಳು 2 ನೇ ಪಾರ್ಟಿ ಸಂಸ್ಥೆ ಯ ಅಡಿಯಲ್ಲಿ ಬರುತ್ತವೆ ಎಂದರೆ ಸರಿ

.

ಸಾಕ್ಷಿಯು ಮುಂದುವರೆದು  ಆದರೆ ನಮ್ಮ ಸಂಸ್ಥೆಯ ಮೂಲ ಕೆಲಸ Craft paper ತಯಾರಿಸುವುದಾಗಿರುತ್ತದೆ. Craft paper  ನ್ನು ಸ್ಟೀಮ್ ಅನ್ನು ಬಳಿಸಿ ತಯಾರಿಸಲಾಗುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯು ಲಾಭಗಳಿಸುತ್ತಿದ್ದರೂ ಲಾಭ ಗಳಿಸುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ . ಸಂಸ್ಥೆ ಯ ಎಲ್ಲಾ ಸೆಕ್ಸನ್ ಗಳು ಒಂದೇ ಆಗಿದ್ದರಿಂದ ಹಾಗೂ ಸಂಸ್ಥೆಯು ಲಾಭವನ್ನು ಗಳಿಸುತ್ತಿರುವುದರಿಂದ ಕಾರ್ಮಿಕರಿಗೆ ಸದರಿ ಲಾಭವನ್ನು ನೀಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. Craft paper ಸೆಕ್ಸನ್ ಲಾಸ್ ನಲ್ಲಿ ನಡೆಯುತ್ತಿರುವುದರ ಬಗ್ಗೆ ಈ ನ್ಯಾಯಾಧೀಕರಣದ ಮುಂದೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾರ್ಮಿಕ ರ ಬೇಡಿಕೆಗಳನ್ನು ಈಡೇರಿಸಿದ್ದಲ್ಲಿ ಸಂಸ್ಥೆ ಗೆ ಯಾವುದೇ ರೀತಿಯ ನಷ್ಟ ವಾಗುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ  ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.